# ಸಿವಿಲ್ ಮತ್ತು ಜೆಎಮ್ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.
## ಸಿ.ಸಿ ನಂಃ **674 / 2021**

| | | |
|---|---|---|
| ಸಾಕ್ಷಿಯ ಹೆಸರಃ | ಶ್ರೀ.ಶ್ರೀಧರ್ ನಿರೋಣಿ | ಫ್ರಾಸಾಃ **03** |
| ತಂದೆ ಹೆಸರುಃ | ಅಶೋಕ | ಚಾಸಾಃ **01** |
| ವಯಸ್ಸುಃ | **31** ವರ್ಷ | ದಿಃ **11.02.2026** |
| ಉದ್ಯೋಗಃ | ಅಬಕಾರಿ ನೀರಿಕ್ಷಕರು | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಆಳಂದ | |

<u>ಮುಖ್ಯ ವಿಚಾರಣೆಃ</u> ಮಾನ್ಯ ಹಿ.ಸ.ಸ.ಅ.ರಿಂದಃ

ನಾನು ಜುಲೈ 2019 ರಿಂದ ಡಿಸೆಂಬರ್ 2023 ವರೆಗೆ ಯಾದಗಿರಿ ಅಬಕಾರಿ ವಲಯದಲ್ಲಿ ಉಪ-ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 08.03.2021 ರಂದು ಮಃ 1.30 ಗಂಟೆಗೆ ನಾನು ಕಚೇರಿಯಲ್ಲಿ ಇದ್ದಾಗ ಕುಂಟಿಮರಿ ಚೆಕ್ ಪೊಸ್ಟ್ ಹತ್ತಿರ ಸೇಂದಿ ಸಾಗಾಟ ನಡೆದಿರುವ ಬಗ್ಗೆ ನನಗೆ ಮಾಹಿತಿ ಬಂದಿರುತ್ತದೆ. ನಾನು ಸಿಬ್ಬಂದಿಗಳಿಗೆ ಮಾಹಿತಿ ತಿಳಿಸಿ ಅವರನ್ನು ಕರೆದುಕೊಂಡು ಮಃ 2.40 ಗಂಟೆಗೆ ಕುಂಟಿಮರಿ ಚೆಕ್ ಪೊಸ್ಟ್ ಹತ್ತಿರ ಹೋಗಿದ್ದೆನು. ಮಾರ್ಗ ಮಧ್ಯದಲ್ಲಿ ಅನಪೂರ ಗ್ರಾಮದಲ್ಲಿ ಸಾರ್ವಜನಿಕರನ್ನು ಪಂಚರಾಗುವಂತೆ ಕೇಳಿಕೆಂಡಾಗ ಅವರುಗಳು ಒಪ್ಪಿಕೊಂಡಿರಲಿಲ್ಲ. ಆದ್ದರಿಂದ ಚಾಸಾಃ 2 ಮತ್ತು 3 ರವರನ್ನು ಪಂಚರನ್ನಾಗಿ ನೇಮಕ ಮಾಡಿಕೊಂಡಿದ್ದೆನು. ನಂತರ ಕುಂಟಿಮರಿ ಚೆಕ್ ಪೊಸ್ಟ್ ಹತ್ತಿರ ರಸ್ತೆಗಾವಲು ಮಾಡುತ್ತಿರುವಾಗ ನಾರಾಯಣಪೇಟೆ ಕಡೆಯಿಂದ ಒಂದು ಬೈಕ್ ಬರುತ್ತಿದ್ದು ಪೆಟ್ರೋಲ್ ಟ್ಯಾಂಕಿನ ಮೇಲೆ ಪ್ಲಾಸ್ಟಿಕ್ ಚೀಲ ಇರುವುದು ಕಂಡುಬಂದಿರುತ್ತದೆ. ಬೈಕನ್ನು ನಿಲ್ಲಿಸಿ ಚಾಲಕನನ್ನು ಚೀಲದಲ್ಲಿ ಏನಿದೆ ಎಂದು ವಿಚಾರಿಸಿದಾಗ ಆತ ಸಮಂಜಸ ಉತ್ತರ ನೀಡಿರಲಿಲ್ಲ. ನಂತರ ಶೋಧನಾ ಪತ್ರವನ್ನು ತಯಾರಿಸಿಕೊಂಡು ಪರಿಶೀಲನೆ ಮಾಡಿದಾಗ ಸದರಿ ಚೀಲದಲ್ಲಿ ಬಿಳಿ ಬಣ್ಣದ ಪದಾರ್ಥ ತುಂಬಿರುವ ಪ್ಲಾಸ್ಟಿಕ್ ಕ್ಯಾರಿಬ್ಯಾಗುಗಳು ಇರುವುದು ಕಂಡುಬಂದಿರುತ್ತದೆ. ಅವುಗಳನ್ನು ಬಿಚ್ಚಿ ಪರಿಶೀಲಿಸಿದಾಗ ಸೇಂದಿ ಇರುವುದು ಕಂಡುಬಂದಿರುತ್ತದೆ. ನಾಲ್ಕು ಕ್ಯಾರಿಬ್ಯಾಗುಗಳಲ್ಲಿ 2 ಲೀ. ನಂತೆ ಒಟ್ಟು 8 ಲೀ. ಕಲಬೆರಕೆ ಸೇಂದಿ ಇರುವುದು ಕಂಡುಬಂದಿರುತ್ತದೆ. ಬೈಕ್ ಸ್ಪೆಂಡರ್ ಪ್ಲಸ್ ಆಗಿದ್ದು ನಂ.ಎಪಿ-22 ಎಪಿ-6186 ಆಗಿರುವುದು ಕಂಡುಬಂದಿರುತ್ತದೆ. ಆರೋಪಿಯನ್ನು ವಿಚಾರಿಸಲಾಗಿ ತನ್ನ ಹೆಸರು

ಮಲ್ಲಿಕಾರ್ಜುನ ತಂದೆ ದೇವಿಂದ್ರಪ್ಪ ಸಾಃ ದೇವನಹಳ್ಳಿ @ ಅಮ್ಮಾಪಲ್ಲಿ ಎಂದು ತಿಳಿಸಿದ್ದನು. ಆರೋಪಿ ಮಾರಾಟಕ್ಕಾಗಿ ಸೇಂದಿ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದ್ದನು. ದೊರೆತ ಸೇಂದಿ ಪೈಕಿ 1 ಲೀ. ನ್ನು ಮಾದರಿಯಾಗಿ ತೆಗೆದುಕೊಂಡಿದ್ದೆನು. ಸ್ಥಳದಲ್ಲಿ ಮಃ 03.00 ರಿಂದ 4.00 ವರೆಗೆ ಪಂಚನಾಮೆ ಮಾಡಿ ಮು.ಮಾಲಿನೊಂದಿಗೆ ಕಚೇರಿಗೆ ಬಂದು ಸರಕಾರದ ಪರವಾಗಿ ದೂರು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಪ್ರ.ವ.ವರದಿ ಕಳುಹಿಸಿದ್ದೆನು. ನಂತರ ಕಡತವನ್ನು ಚಾಸಾಃ 7 ರವರಿಗೆ ತನಿಖೆಗೆ ಒಪ್ಪಿಸಿದ್ದೆನು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಆತ ಸೇಂದಿ ಸಾಗಾಟ ಮಾಡುತ್ತಿದ್ದ ವ್ಯಕ್ತಿ ಆಗಿರುತ್ತಾನೆ ಎಂದು ನುಡಿಯುತ್ತಾರೆ.

ಸಾಕ್ಷಿ ಮು.ಮಾ 1 ರಲ್ಲಿನ ಬಾಟಲಿಯನ್ನು ನೋಡಿ ಅದು ಮಾದರಿ ಸೇಂದಿ ಬಾಟಲಿ ಆಗಿರುತ್ತದೆ ಎಂದು ನುಡಿಯುತ್ತಾರೆ.

ಶೋಧನಾ ಪತ್ರವನ್ನು ನಿಪಿ-3 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3 ಎ, ಪಂಚನಾಮೆಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1 ಬಿ, ಮಾದರಿ ಮುದ್ರೆ ಚೀಟಿಯನ್ನು ನಿಪಿ-4 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4 ಎ, ದೂರನ್ನು ನಿಪಿ-5 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5 ಎ, ಪ್ರ.ವ.ವರದಿಯನ್ನು ನಿಪಿ-6 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಜಿ.ಆರ್ ವಕೀಲರಿಂದಃ</u>

ಮಾಹಿತಿ ಬಂದಾಗ ನಾನು ಕಚೇರಿಯಲ್ಲಿ ಇದ್ದೆನು. ನಮ್ಮ ಕಚೇರಿಯಿಂದ ಗುನ್ನೆಜಾಗ 30 ಕಿಮೀ ಇರಬಹುದು. ನಮ್ಮ ಕಚೇರಿಯಿಂದ ಗುನ್ನೆಜಾಗ 50 ಕಿಮೀ ಇದೆ ಎಂದರೆ ಸಾಕ್ಷಿ ನನಗೆ ನಿಖರವಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಷ್ಟು ಜನರನ್ನು ಪಂಚರಾಗುವಂತೆ ಕೇಳಿದ್ದೀರಿ ಎಂದರೆ ಸಾಕ್ಷಿಯು ಗುಂಪಾಗಿ ನಿಂತಿದ್ದ ಜನರನ್ನು ಕೇಳಿದ್ದೆವು, ನನಗೆ ನಿಖರ ಸಂಖ್ಯೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಗುನ್ನೆಜಾಗ ಮುಖ್ಯ ರಸ್ತೆಯಲ್ಲಿ ಇದೆ ಎಂದರೆ ಸರಿ. ಕುಂಟಿಮರಿ ಚೆಕ್ ಪೋಸ್ಟ್ ತೆಲಂಗಾಣ ರಾಜ್ಯದ ವ್ಯಾಪ್ತಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಹೋಗಿ ನಿಂತ ನಂತರ ಮೊದಲು ಆರೋಪಿಯ ಬೈಕೇ ಬಂದಿತ್ತು. ನಾವು ಸ್ಥಳಕ್ಕೆ ಹೋದ 15-20 ನಿಮಿಷಗಳ ನಂತರ ಆರೋಪಿಯ ಬೆಕ್ ಬಂದಿತ್ತು. ಅನಪುರ ಗ್ರಾಮದಲ್ಲಿ ಜನರನ್ನು ಪಂಚರಾಗುವಂತೆ ಕೇಳಿದ್ದೆವು ಎಂದು ಪಂಚನಾಮೆಯಲ್ಲಿ ನಮೂದು ಇಲ್ಲ ಎಂದರೆ ಸರಿ.

ಸ್ಥಳದಿಂದ ಪ್ಲಾಸ್ಟಿಕ್ ಚೀಲವನ್ನು ಸಹ ಜಪ್ತಿ ಮಾಡಿಕೊಂಡಿದ್ದೆನು. ನಂತರ ಅದನ್ನು ಕಡತದೊಂದಿಗೆ ಚಾಸಾಃ 7 ರವರಿಗೆ ಒಪ್ಪಿಸಿದ್ದೆನು. ಬೈಕಿನಲ್ಲಿ ಆರೋಪಿ ಒಬ್ಬ ಮಾತ್ರ ಬಂದಿದ್ದನು. ಆರೋಪಿಗೆ ಬೈಕ್ ಓಡಿಸಲು ಬರುವುದಿಲ್ಲ ಎಂದರೆ ಸರಿಯಲ್ಲ.

ಪಂಚನಾಮೆಯನ್ನು ನಮ್ಮ ಸಿಬ್ಬಂದಿ ಶರೀಫ್ ವಾಲಿಕರ್ ರವರು ಬರೆದಿದ್ದರು. ಪಂಚನಾಮೆಗೆ ಅವರ ಸಹಿಯನ್ನು ನಾನು ಪಡೆದುಕೊಂಡಿಲ್ಲ. ಮು.ಮಾ 1 ರ ಬಾಟಲಿಯ ಮೇಲೆ ಯಾವುದೇ ಕಂಪನಿ ಹೆಸರು ನಮೂದು ಇಲ್ಲ ಎಂದರೆ ಸರಿ. ಆರೋಪಿಯನ್ನು ನಾನು ಈ ದಿನ ಮೊದಲ ಬಾರಿ ನೋಡುತ್ತಿದ್ದೇನೆಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಇಲಾಖಾ ಮೊಹರು ನಂಬರನ್ನು ನಮೂದಿಸಿಲ್ಲ ಎಂದರೆ ಸರಿ.

ನಾವು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ.